# ರಂಗ ಕುಬೇರ



**ಇಂದುಚೇತನ ಬೋರುಗುಡ್ಡೆ**

ಕಲೆ: ಪ್ರವೀಣ್ ಆಚಾರ್ಯ

ಹೊರಗಡೆ ಉರಿ ಕಾರುವ ಬಿಸಿಲಿದ್ದರೂ, ಸುಗಂಧಿನಿ ಹೊಳೆಯ ದಡದ ಮರದ ಕೆಳಗೆ ಹಾಸಿದ್ದ ಚಪ್ಪಡಿ ಕಲ್ಲಿನ ಮೇಲೆ ನಾನು ಮತ್ತು ಅವರು ಇಬ್ಬರೇ ಕುಳಿತಿದ್ದೆವು. ಸುಗಂಧಿನಿ ಎಲ್ಲೆಲ್ಲೋ ಬಳುಕಿ ಏರಿ ಹಾರಿ ತನ್ನಷ್ಟಕೆ ಅನೇಕಾನೇಕ ಕಥೆಗಳನ್ನು ತನ್ನೊಡಲೊಳಗೆ ಬೆಚ್ಚಗೆ ತುಂಬಿಕೊಂಡು ಹರಿಯುತ್ತಿದ್ದಳು. ಓ... ಆ ಮರದ ಮೇಲೆ ಗುಂಜರಗೈಯುವ ಹಕ್ಕಿಗಳನ್ನು ಮತ್ತು ಸುಗಂಧಿನಿಯ ಜುಳು ಜುಳು ನಾದವನ್ನೂ ಬಿಟ್ಟರೆ, ನಮ್ಮಿಬ್ಬರ ನಡುವೆ ಮಾತು ಮುಗಿದು ಶತಮಾನಗಳು ಕಳೆದು ಹೋದವೇನೋ ಎನ್ನುವಷ್ಟರ ಮಟ್ಟಿಗೆ ಗಾಢ ಮೌನ. ಅತಿಯಾದ ಮಾತು ಹೇಗೆ ಅಸಹನೀಯವೋ ಅತಿಯಾದ ಮೌನವೂ ಅಸಹನೀಯವೇ. ಮೌನವನ್ನು ಮುರಿಯಬಹುದಾದ ಶಬ್ದಗಳಿಗಾಗಿ ಹುಡುಕತೊಡಗಿದೆ.

ಇಲ್ಲ... ಮಾತು ನಾಟಕೀಯವಾದಷ್ಟೂ, ಭಾವನೆಗಳನ್ನು ಕಟ್ಟುವ ಅಥವಾ ಮೌನವನ್ನು ಮುರಿಯುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಮೌನವನ್ನು ಭೇದಿಸುವ ಸಾಹಸವನ್ನು ಬದಿಗಿರಿಸಿ, ಎಲ್ಲೋ ದೂರದಿಗಂತದತ್ತ ನೋಡುತ್ತಿದ್ದವರ ಮುಖವನ್ನೇ ದಿಟ್ಟಿಸತೊಡಗಿದೆ. ಅವರು, ದೀರ್ಘ ನಿಟ್ಟುಸಿರೊಂದನ್ನು ಹೊರಚೆಲ್ಲಿ ಹೊರಡಲನುವಾದರು. ಹಾಂ! ಹೇಳಲು ಮರೆತೆ. ಅವರೆಂದರೆ ಮಣೂರು ಮಾಧವ.

ಇಂದಿಗೂ ಚೆಂಡೆಯ ಮೇಲೆ ಕೋಲು, ಮದ್ದಳೆಯ ಮೇಲೆ ಬೆರಳುಗಳು ನಲಿದಾಡಿದರೆ ಎಂಬತ್ತರ ಮಾಧವ ಇಪ್ಪತ್ತಾಗುತ್ತಾರೆ. ಅದೇನು ಉತ್ಸಾಹ, ಅದೇನು ಪರಕಾಯ ಪ್ರವೇಶ! ನಾನು ತಿಳಿದಂತೆ ಮಾಧವ ಬದುಕಿನಲ್ಲಿ ಹಲವು ಏರಿಳಿತಗಳನ್ನು ಕಂಡವರು. ಆದರೆ, ಯಕ್ಷರಂಗದಲ್ಲಿ ಮಾತ್ರ ಸರಿಸಾಟಿಯಿಲ್ಲದೆ ಮೆರೆದವರು.

ನನಗೆ ಮಣೂರು ಮಾಧವ ಹೊಸಬರೇನೂ ಅಲ್ಲ. ಅವರ ಸಾವಿರಾರು ಅಭಿಮಾನಿಗಳ ಸಾಲಿನಲ್ಲಿ ನಾನು ಸ್ವಲ್ಪ ವಿಶೇಷ ಆತ್ಮೀಯತೆ ಹೊಂದಿದ ಅಭಿಮಾನಿ ಮಾತ್ರವಲ್ಲ, ಓರ್ವ ದೀರ್ಘಕಾಲೀನ ಸಮವಯಸ್ಕನಲ್ಲದ ಒಡನಾಡಿ ಕೂಡ. ಎಲ್ಲಾದರೂ ಆಟ ಕೂಟವಿದ್ದರೆ ಚೌಕಿಯಲ್ಲಿ ಭೇಟಿಯಾದಾಗ ಹರಟಿದ ವಿಷಯಗಳ ಕಂತೆಯೇ ಒಂದು ಸವಿನೆನಪು. ಆದರೂ ಈ ದಿನ ನಾವಿಬ್ಬರೂ ಮಾತುಗಳಿಗಾಗಿ ಹುಡುಕಾಡುವ ಪರಿಸ್ಥಿತಿ ಒದಗಿದ್ದು ಮಾತ್ರ ವಿಷಾದನೀಯವೇ ಹೌದು. ಎದ್ದು ನಿಂತ ಮಾಧವರನ್ನು ಎಡಗೈ ಹಿಡಿದು ಜಗ್ಗಿ ಕುಳಿತುಕೊಳ್ಳುವಂತೆ ಮಾಡಿದೆ.

“ಯಾಕೆ ಹೀಗಾಯ್ತು?” ಮೆಲ್ಲ ಗೊಗ್ಗರು ಸ್ವರದಲ್ಲಿ ಕಷ್ಟಪಟ್ಟು ಕೇಳಿದೆ. ಅರೆಕ್ಷಣ ಮತ್ತದೇ ಮೌನ.

“ಹಾಲು ಬತ್ತಿ ಹೋದ ಮೇಲೆ ಮುದಿದನ ಯಾರಿಗೂ ಬೇಡ ಸುಬ್ರಾಯ.” ನಡುಗುವ ಸ್ವರದಲ್ಲಿ